# ಇಮೋಜಿ ಭಾಷೆ

ಮೊದಲನೆಯದಾಗಿ, ಈ ಸಾಲುಗಳನ್ನು ಗಮನಿಸಿ:
ಬಟ್ಟೆ ಒಣಗಿಸುವ ಕ್ಲಿಪ್ಪು
ಬಿಳಿಯ ಪಿಂಗಾಣಿ ಕಪ್ಪು
ನಾಯಿ ಬಿಸ್ಕತ್ತು

ಹಸಿ ಬಟಾಣಿ
ಕೊತ್ತಂಬರಿ ಸೊಪ್ಪು
Sunflower oil

ಕೊನೆಯ ಸಾಲನ್ನು ಓದುವವರೆಗೂ ಇದನ್ನು ನೀವು ಒಂದು ಚುಟುಕು ಕವನ ಎಂದು ಭಾವಿಸುವ ಸಾಧ್ಯತೆಗಳೇ ಹೆಚ್ಚು.

ಎರಡನೆಯದು, ಸಣ್ಣ ಪ್ರಯೋಗ – ನೂರು ಅತ್ಯುತ್ತಮ ಕವನಗಳಿಂದ ಸುಮಾರು ಒಂದು ಸಾವಿರದಷ್ಟು ಸಾಲುಗಳನ್ನು ಆಯ್ದು, ಒಂದೊಂದನ್ನೇ ಪ್ರತ್ಯೇಕ ಹಾಳೆಯಲ್ಲಿ ಬರೆದು ಮಡಚಿ ಬುಟ್ಟಿಯೊಂದರಲ್ಲಿ ಹಾಕಬೇಕು. ಅದರಲ್ಲಿಯ ಹತ್ತಿಪ್ಪತ್ತು ಹಾಳೆಗಳನ್ನು ರ್‍ಯಾಂಡಮ್ ಆಗಿ ಆರಿಸಿಕೊಂಡು, ಸಿಕ್ಕ ಸಾಲುಗಳನ್ನೇ ಬಳಸಿ, ಹಿಂದೆ–ಮುಂದೆ ಪೋಣಿಸಿ ಪದ್ಯವೊಂದನ್ನು ರಚಿಸಿಬೇಕು. (ಕೆಲವರು ಇದೇ ತೆರನಾಗಿ ಕವಿತೆ ರಚಿಸುವಲ್ಲಿ ನಿಪುಣರು ಎನ್ನುವ ವ್ಯಂಗ್ಯದ ಮಾತೂ ಚಾಲ್ತಿಯಲ್ಲಿದೆ. ಆದರೆ, ಅದಿಲ್ಲಿ ಪ್ರಸ್ತುತವಲ್ಲ).

ಯಂತ್ರಗಳಿಂದ ಉತ್ಪಾದನೆಗೊಂಡ ಕವನ ಕೂಡಾ ಈ ಮೇಲಿನ ಎರಡು ವಿಧಾನಗಳನ್ನು ಮೇಳೈಸಿಕೊಂಡು ರಚಿತವಾದ ಪದ್ಯದ ಗುಣಲಕ್ಷಣಗಳನ್ನೇ ಹೊಂದಿರುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಕವಿತೆ ರಚಿಸುವ ಕಂಪ್ಯೂಟರುಗಳಲ್ಲಿ, ಲಭ್ಯವಿರುವ ಲಕ್ಷಾಂತರ ಕವನಗಳನ್ನು ಮೊದಲಿಗೆ ಫೀಡ್ ಮಾಡಲಾಗುತ್ತದೆ. ನಂತರ ಭಾಷೆಯ ಬಳಕೆ, ವ್ಯಾಕರಣ, ಪದ–ವಾಕ್ಯಗಳ ನಡುವಿನ ಹೊಂದಾಣಿಕೆಯ ಲಾಜಿಕ್ಕು ಇತ್ಯಾದಿಗಳನ್ನು ಪ್ರೋಗ್ರಾಮ್ ಮಾಡಲಾಗುತ್ತದೆ. ಗುಂಡಿ ಒತ್ತಿದ ಕೂಡಲೇ, ಅಲ್ಗೋರಿದಮ್ ಮುಖೇನ ಈ ಸಾಲುಗಳನ್ನೆಲ್ಲ ಹೆಕ್ಕಿ ಹೊಂದಿಸಿ ತನ್ನದೇ ಸ್ವಂತ ಕವನ ರಚಿಸುತ್ತದೆ ಕಂಪ್ಯೂಟರು. ಅದರೊಳಗೆ ಹೆಚ್ಚೆಚ್ಚು ಸಿದ್ಧ ಕವನಗಳನ್ನು ಫೀಡ್ ಮಾಡುತ್ತಾ ಹೋದಂತೆ, ಸಾಲುಗಳು ಒಪ್ಪವಾಗಿ ಕೂಡುವ ಸಂಭವನೀಯತೆ ವೃದ್ಧಿಸುತ್ತ ಕವನದ ಗುಣಮಟ್ಟ ಹೆಚ್ಚುತ್ತಾ ಹೋಗುತ್ತದೆ.

ಯಂತ್ರವೊಂದು ಅದೆಷ್ಟೇ ಒಳ್ಳೆಯ ಕವನ ಸಿದ್ಧಪಡಿಸಬಹುದಾದರೂ, ಅದರಲ್ಲಿ ಮನುಷ್ಯ ರಚಿತ ಕಾವ್ಯದ ಆತ್ಮವಿದ್ದೀತೇ? ಈ ಪ್ರಶ್ನೆಗೆ ಉತ್ತರ ಸುಲಭವಲ್ಲ.

ಈ ಕವನವನ್ನೊಮ್ಮೆ ಓದಿ:

A lion roars and a dog barks.
It is interesting and fascinating that
a bird will fly and not roar or bark.
Enthralling stories about animals are in
my dreams and
I will sing them all if I am not exhausted
or weary.

ಇದು ಮನುಷ್ಯ ಬರೆದ ಕವನವೋ ಅಥವಾ ಕಂಪ್ಯೂಟರು ರಚಿಸಿದ್ದೋ? ಒಂದು ಮಾಹಿತಿಯ ಪ್ರಕಾರ, ಶೇಕಡಾ 65ರಷ್ಟು ಜನರ ಊಹೆ ಇಲ್ಲಿ ತಪ್ಪಾಗಿದೆಯಂತೆ. ಒಂದು ವೇಳೆ ಈ ಕವನವನ್ನು ಕಂಪ್ಯೂಟರ್ ರಚಿಸಿದೆ ಎಂದಾದರೆ, ಸಿಂಹ ಗರ್ಜಿಸುತ್ತದೆ, ನಾಯಿ ಬೊಗಳುತ್ತದೆ ಆದರೆ, ಹಕ್ಕಿಗೆ ಬೊಗಳಲೂ ಗರ್ಜಿಸಲೂ ಆಗುವುದಿಲ್ಲ ಬದಲಾಗಿ ಅದು ಹಾರುತ್ತದೆ ಎನ್ನುವ 'ಟೆಕ್ನಿಕಲಿ ಕರೆಕ್ಟ್' ಅರ್ಥದ ಹೊರತೂ ಮತ್ತೇನೋ ಇದರಲ್ಲಿದೆ ಎಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಅದರದೇನಿದ್ದರೂ ಪುನರ್ ಸೃಷ್ಟಿಯಷ್ಟೇ. ಆದರೆ, ಇವೇ ಸಾಲುಗಳು ಮನುಷ್ಯನೊಬ್ಬನ ಲೇಖನಿಯಿಂದ ಬಂದಿದ್ದರೆ ಅದಕ್ಕೆ ಇದೇ ನಿರ್ದಿಷ್ಟ ಅರ್ಥವೆಂಬುದಿಲ್ಲ. ಓದುಗನಿಗೆ ಹೇಗೆ ದಕ್ಕೀತೋ ಹಾಗೆ ತನ್ನ ಅರ್ಥವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ ಹೋಗುವ ಕವಿತೆಯಾಗುತ್ತದಿದು.

ಇನ್ನೊಂದು ಉದಾಹರಣೆ ತೆಗೆದುಕೊಳ್ಳಿ. 'ಅಪಾರ್ಟ್‌ಮೆಂಟಿನ ಒಳಗೋಡೆಗಳ ನಡುವೊಂದು ಖಾಲಿ ಕೋಣೆ' ಎನ್ನುವ ಸಾಲು ಇತ್ತೀಚೆಗೆ ಕಂಪ್ಯೂಟರೊಂದು ರಚಿಸಿದ ಕವನವೊಂದರ ಸಾಲು. ಅತೀ ಪ್ರಾಕ್ಟಿಕಲ್ ಅನ್ನಿಸಬಹುದಾದ ಈ ವಾಕ್ಯವನ್ನು ಕವಿಯೊಬ್ಬ ಸೃಜಿಸಿದ್ದರೆ, ಆ ಖಾಲಿ ಕೋಣೆ ಕೇವಲ